# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 5722-2008

ಚಾಸಾ-13 ಪ್ರಾಸಾ-4

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜ |
| ತಂದೆಯ ಹೆಸರು | ರಾಮಪ್ಪ |
| ವಯಸ್ಸು | 44 ವರ್ಷ |
| ಉದ್ಯೋಗ | ಪೊಲೀಸ್ ಮುಖ್ಯ ಪೇದೆ, ಲೋಕಾಯುಕ್ತ, ಬೆಂಗಳೂರು. |
| ವಾಸ | ನೆಲಮಂಗಲ, ಬೆಂಗಳೂರು |
| ಪ್ರಮಾಣೀಕರಿಸಿದ ದಿನಾಂಕ | 26/09/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

2002 ರಿಂದ 2010 ರವರೆಗೆ ಎಸ್.ಜೆ. ಪಾರ್ಕ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ 9378 ಆಗಿ ಕರ್ತವ್ಯ ಸಲ್ಲಿಸಿದ್ದೇನೆ. ಮೊ.ಸಂ. 52/2006 ರಲ್ಲಿ ಆರೋಪಿಯನ್ನು ಪತ್ತೆ ಮಾಡುವ ಸಲುವಾಗಿ ನನ್ನನ್ನು ನೇಮಿಸಿದ್ದರು. ಅದರಂತೆ ನಾವು ಗಸ್ತಿನಲ್ಲಿರುವಾಗ ಮದ್ಯಾಹ್ನ 01.10 ಗಂಟೆಯ ಸಮಯದಲ್ಲಿ ಬಾತ್ಮಿದಾರರ ಮಾಹಿತಿಯ ಮೇರೆಗೆ ಟೌನಹಾಲ್ ಮುಂದೆ ಈ ಪ್ರಕರಣದ ಆರೋಪಿ ಇರುವುದಾಗಿ ತಿಳಿಸಿದ ಮೇರೆಗೆ, ನಾನು ಮತ್ತು ನಮ್ಮ ಸಿಬ್ಬಂದಿ ಮಹಿಳಾ ಪೊಲೀಸ್ ಪೇದೆ 2036 ರವರೊಂದಿಗೆ ಹೋಗಿ ಆರೋಪಿಯನ್ನು ಹಿಡಿದುಕೊಂಡು ಹೆಸರು ವಿಳಾಸ ಕೇಳಲಾಗಿ ಅವರು ತಮ್ಮ ಹೆಸರು ಸಾಧನಾ ಕೋಂ. ಜಗನ್ನಾಥ, ನಂ.448, ಬಿ.ಇ.ಎಮ್.ಎಲ್. ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು ಎಂದು ತಿಳಿಸಿದರು. ನಂತರ ಮದ್ಯಾಹ್ನ 01.45 ಗಂಟೆಗೆ

ಆರೋಪಿಯನ್ನು ನಮ್ಮ ಠಾಣೆಗೆ ಕರೆದುಕೊಂಡು ಬಂದು ನಮ್ಮ ಪಿ.ಐ. ರವರ ಮುಂದೆ ಹಾಜರು ಪಡಿಸಿ ವರದಿ ನೀಡಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಗುರುತಿಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು : ಶ್ರೀ. ಸಿ.ಎನ್.ಡಿ. ಆರೋಪಿ ಪರ ವಕೀಲರಿಂದ ಃ**

2. ಆರೋಪಿ ಪತ್ತೆಗೆ ಮೊದಲು ಅವರ ಭಾವಚಿತ್ರ ತೋರಿಸಿರಲಿಲ್ಲ, ಚಹರೆ ಹೇಳಿರಲಿಲ್ಲ, ಆದರೆ ಅವರ ವಯಸ್ಸು ಮಾತ್ರ ಹೇಳಿದ್ದರು. ಆರೋಪಿಯನ್ನು ನನ್ನ ಜೊತೆ ಮಹಿಳಾ ಪೊಲೀಸ್ ಪೇದೆ ಅವರು ಬಂಧಿಸಿರುತ್ತಾರೆ. ನಾನು ಬಂಧಿಸಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**